ಶ್ರೀ ಡಿ.ಬಿ. ಇನಾಂದಾರ್:— ಆ ವಿವರಗಳು ನನ್ನ ಬಳಿ ಇಲ್ಲ, ಮಾನ್ಯ ಸುಬ್ಬಾರೆಡ್ಡಿಯವರು ಕೇಳಿದ ಪ್ರಶ್ನೆ ಸಾಲ್ವೆಂಟ್ ಬಗ್ಗೆ ತಮಗೆ ಹೇಳಿದ್ದೇನೆ. ಇದಕ್ಕೆ ಕಮಿಷನರ್ ಆಫ್ ಪೋಲಿಸ್ ಇನ್‌ಸ್ಪೆಕ್ಟಿಂಗ್ ಅಥಾರಿಟಿ ಇರುತ್ತಾರೆ. ಉಳಿದ ಕಡೆ ಆಹಾರ ಇಲಾಖೆಯ ಅಧಿಕಾರಿಗಳು, ಡೆಪ್ಯುಟಿ ಡೈರೆಕ್ಟರ್ ಇನ್‌ಸ್ಪೆಕ್ಟಿಂಗ್ ಅಥಾರಿಟಿ ಇರುತ್ತಾರೆ. ಬೆಂಗಳೂರಿನಲ್ಲಿ ಇನ್‌ಫಾರ್ಮಲ್ ರೇಷನಿಂಗ್ ಏರಿಯಾದಲ್ಲಿ ಪೋಲಿಸ್ ಕಮಿಷನರ್ ಮತ್ತು ಪೋಲಿಸ್ ಅಧಿಕಾರಿಗಳು ಸಾಲ್ವೆಂಟ್ ಬಳಿ ಪೆಟ್ರೋಲ್ ಬಗ್ಗೆ ಇನ್‌ಸ್ಪೆಕ್ಷನ್ ಮಾಡುವ ಕಾರ್ಯ ನಡೆಸಿದ್ದಾರೆ. ಇಂತಹ ಪ್ರಕರಣಗಳಲ್ಲಿ ಪತ್ತೆಯಾಗಿರುವಂತಹ ಸಾಕಷ್ಟು ಪ್ರಕರಣಗಳು ಪತ್ರಿಕೆಯಲ್ಲಿ ಕೂಡ ಬಂದಿವೆ, ಅದನ್ನು ತಾವೂ ಕೂಡ ಓದಿದ್ದೀರಿ. ಇನ್ನುಳಿದ ಪೆಟ್ರೋಲ್ ಬಂಕ್‌ಗಳಲ್ಲಿ ಕಡಿಮೆ ಅಳತೆ ಕೊಡುವ ವಿಚಾರ ತಾವು ನಮ್ಮ ಗಮನಕ್ಕೆ ತಂದಿದ್ದೀರಿ, ಮಾಪನ ಇಲಾಖೆಯ ಅಧಿಕಾರಿಗಳಿಗೆ ಹೆಚ್ಚಿನ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ನಾವು ಆದೇಶ ಕೊಟ್ಟಿದ್ದೇವೆ. ಕೆಲವು ದೂರುಗಳೂ ಕೂಡ ಬಂದಿವೆ. ಇಲ್ಲಿ ಸರಬರಾಜು ಮಾಡುವ ಡೀಸಲ್ ಕ್ವಾಲಿಟಿ ಸರಿ ಇಲ್ಲವೆಂದು ನನಗೆ ಮಾಹಿತಿ ಬಂದಿದೆ. ಆದರ ಬಗ್ಗೆ ಇನ್‌ಸ್ಪೆಕ್ಷನ್ ಮಾಡುವ ಅಧಿಕಾರವನ್ನು ನಾವು ಸರ್ಕಾರದಿಂದ ಹೊರಡಿಸಿದ್ದೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಅಧ್ಯಕ್ಷರು:— ಮುಂದಿನ ಐದು ಪ್ರಶ್ನೆಗಳನ್ನು ನಾವು ಮುಂದಿನ ದಿವಸ ತೆಗೆದುಕೊಳ್ಳುತ್ತೇವೆ. ನಿಮ್ಮ ಪ್ರಶ್ನೆಗಳು ಲ್ಯಾಪ್ಸ್ ಆಗುವುದಿಲ್ಲ, ಪ್ರಶ್ನೋತ್ತರ ವೇಳೆಗೆ ನಾವು 40 ನಿಮಿಷ ಹೆಚ್ಚಿಗೆ ತೆಗೆದುಕೊಂಡಿದ್ದೇವೆ. ಸಭೆ ಮುಗಿಸುವುದರೊಳಗಾಗಿ ನಿಮ್ಮ ಪ್ರಶ್ನೆಗಳನ್ನು ತೆಗೆದುಕೊಳ್ಳುತ್ತೇವೆ.

(ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):— ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 18ನೇ ಪಟ್ಟಿಯಲ್ಲಿರುವ 187 ಪ್ರಶ್ನೆಗಳ ಪೈಕಿ 135 ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ಸೋಮವಾರಪೇಟೆ ತಾಲ್ಲೂಕಿನ ಚಿಕ್ಕಹೊಳೆಗೆ ಕಟ್ಟಲಾದ ಆಣೆಕಟ್ಟಿನಿಂದ ಇದುವರಿಗೂ ನೀರು ಸರಬರಾಜು ಮಾಡದಿರುವುದು.

2302(2835) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ):— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.